

بسم اللهِ الرّحمٰنِ الرّحيم

# ಖಾದಿಯಾನ್‌ನ ಅಭಿವೃದ್ಧಿ ಮತ್ತು ನಮ್ಮ ಕರ್ತವ್ಯಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **08-05-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರನ್ನು ಉಲ್ಲೇಖಿಸಿ ನಾನು ಖಾದಿಯಾನಿನ ಆರಂಭದ ಸ್ಥಿತಿ ಬಗ್ಗೆ ಪ್ರಸ್ತಾಪಿಸಿದ್ದೆನು. ಖಾದಿಯಾನಿನ ಸುತ್ತು ಮುತ್ತಲಿನ ಪ್ರದೇಶದ ಸ್ಥಿತಿಯ ಬಗ್ಗೆ ಹೇಳಿದ್ದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಗಾಳಿಸಂಚಾರಕ್ಕೆ ಹೊರಟಾಗ ಅವರೊಂದಿಗೆ ಒಂದೆರಡು ಜನರು ಮಾತ್ರ ಇರುತ್ತಿದ್ದರು. ರಸ್ತೆ ಸಹ ಮರಗಳ ಮಧ್ಯೆ ಅಗಲ ಕಿರಿದಾಗಿತ್ತು. ಆದರೆ ಈಗ ಖಾದಿಯಾನ್ ಯಾವ ರೀತಿ ಅಭಿವೃದ್ಧಿಗೊಂಡಿತು. ಈ ಅಭಿವೃದ್ಧಿ ಇತರ ಊರುಗಳ ಹಾಗೆ ಅಲ್ಲ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಖಾದಿಯಾನ್ ಅಭಿವೃದ್ಧಿ ಹೊಂದುವುದೆಂದು ಮುಂಚಿತವಾಗಿ ತಿಳಿಸಿದ್ದನು. ದೊಡ್ಡ ರಾಜ ಮಾರ್ಗಗಳ ಬದಿಯಲ್ಲಿರುವ ಊರುಗಳು ಬೇಗ ಅಭಿವೃದ್ಧಿ ಹೊಂದುತ್ತವೆ. ಆದರೆ ಖಾದಿಯಾನ್ ಒಂದು ಮೂಲೆಯಲ್ಲಿತ್ತು. ಅಲ್ಲಿಗೆ ಹೋಗಲು ಸರಿಯಾದ ಮಾರ್ಗಗಳೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಾಹನು ಖಾದಿಯಾನ್ ಅಭಿವೃದ್ಧಿ ಹೊಂದುವುದೆಂದು ತಿಳಿಸಿದನು. ಇಂದು ಖಾದಿಯಾನನ್ನು ಸಂದರ್ಶಿಸಲು ದೂರದೂರುಗಳಿಂದ ಜನರು ಬರುತ್ತಿದ್ದಾರೆ. ಅಹ್ಮದಿಯಾ ಜಮಾಅತಿನ ಸ್ವಾಧೀನದಲ್ಲಿರುವ ಖಾದಿಯಾನಿನ ಪ್ರದೇಶ ಬೃಹತ್ತಾದ ಮತ್ತು ಸುಂದರ ಕಟ್ಟಡಗಳಿಂದ ತುಂಬಿದೆ. ಈ ಕಾರಣದಿಂದ ಸರಕಾರಿ ಸಂಸ್ಥೆಗಳು ಕೆಲವು ಕಾರ್ಯಕ್ರಮಗಳಿಗಾಗಿ ಈ ಕಟ್ಟಡಗಳನ್ನು ಉಪಯೋಗಿಸಲು ನಮ್ಮ ಅನುಮತಿ ಕೋರುತ್ತಿದ್ದಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಖಾದಿಯಾನಿನ ಅಭಿವೃದ್ಧಿಯ ದೃಷ್ಟಾಂತದ ಬಗ್ಗೆ ಕೆಲವು ಸ್ಥಳಗಳಲ್ಲಿ ವಿವರಿಸಿದ್ದಾರೆ. ಅವರು ಹೇಳುತ್ತಾರೆ: "ನೋಡಿರಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವ್ಯಕ್ತಿತ್ವದಲ್ಲಿಯೇ ಎಂತಹ ಭವ್ಯ ದೃಷ್ಟಾಂತಗಳನ್ನು ಅಲ್ಲಾಹನು ತೋರಿಸಿದನು. ನೀವು ಆ ಕಾಲವನ್ನು ಕಂಡಿಲ್ಲ ಆದರೆ ನಾವು ಕಂಡಿದ್ದೇವೆ. ಸಮೀಪ ಕಾಲದ ಈ ದೃಷ್ಟಾಂತಗಳನ್ನು ನಿಮ್ಮ ಯೋಚನೆಯ ಕಣ್ಣುಗಳಿಂದ ನೋಡುವುದು ಕಷ್ಟವೇನೂ ಅಲ್ಲ. ಆ ದೃಷ್ಟಾಂತಗಳನ್ನು ಬಿಡಿರಿ, ನೀವು ಮಸ್‌ಜಿದ್ ಮುಬಾರಕನ್ನು ನೋಡಿರಿ. ಮಸ್‌ಜಿದ್ ಮುಬಾರಕ್‌ನಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಒಂದು ಸ್ತಂಭ ಇದೆ. ಈ ಸ್ತಂಭದ ಉತ್ತರದ ಭಾಗದಲ್ಲಿರುವ ಸ್ಥಳವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದ ಮಸ್‌ಜಿದ್ ಆಗಿತ್ತು. ಆ ಕಾಲದಲ್ಲಿ ಈ ಮಸ್‌ಜಿದ್‌ನಲ್ಲಿ ನಮಾಝ್ ಮಾಡುವವರ ಒಂದು ಸಾಲು ಅಥವಾ ಎರಡು ಸಾಲು ಮಾತ್ರ ಇರುತ್ತಿತ್ತು. ಒಂದು ಸಾಲಿನಲ್ಲಿ ಆರೇಳು ಜನರು ಮಾತ್ರ ನಿಲ್ಲಬಹುದಾಗಿತ್ತು. ಕ್ರಮೇಣ ಈ ಮಸ್‌ಜಿದ್‌ನಲ್ಲಿ ನಮಾಝ್ ಮಾಡುವವರ ಸಂಖ್ಯೆ ಹೆಚ್ಚಾಗಿ ಮೂರನೆಯ ಸಾಲು ಸಹ ನಮಾಝ್ ಮಾಡುವವರಿಂದ ತುಂಬಿದಾಗ ನಮ್ಮ ಆಶ್ಚರ್ಯಕ್ಕೆ ಮಿತಿಯೇ ಇರಲಿಲ್ಲ. ಎಂದರೆ ಎರಡು ಸಾಲುಗಳ ಹದಿನಾಲ್ಕು ಜನರ ನಂತರ ಹದಿನೈದನೆಯ ಮತ್ತು ಹದಿನಾರನೆಯ ವ್ಯಕ್ತಿ ನಮಾಝ್ ಮಾಡಲು ಬರುವಾಗ ನಾವು ಆಶ್ಚರ್ಯಗೊಂಡು ಹೇಳುತ್ತಿದ್ದೆವು ಈಗ ಮಸ್‌ಜಿದ್‌ಗೆ ಬಹಳ ಜನರು ಬರುತ್ತಿದ್ದಾರೆ ಎಂದು. ಇದು ಎಷ್ಟು ದೊಡ್ಡ ವಿಜಯವಾಗಿದೆ ಎಂದು ನಾವು ಆಶ್ಚರ್ಯ ಭರಿತರಾಗುತ್ತಿದ್ದೆವು. ನೀವು ಈ ಸ್ಥಿತಿಯನ್ನು ಇಂದಿನ ಸ್ಥಿತಿಗೆ ಹೋಲಿಸಿ ನೋಡಿರಿ. ಅಲ್ಲಾಹನ ಅನುಗ್ರಹ ಸುರಿಯಲು ಪ್ರಾರಂಭಿಸುವಾಗ ಅದು ಏನನ್ನು ಏನೆಲ್ಲಾ ಮಾಡಿಬಿಡುತ್ತದೆ ಎಂದು ಯೋಚಿಸಿರಿ."

ಈ ಬದಲಾವಣೆಗಳು ತಮ್ಮ ಸಂಬಂಧಿಕರಲ್ಲಿ ಸಹ ಉಂಟಾದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನಮ್ಮ ತಂದೆಯವರ ಹಿರಿಯ ಸಹೋದರನ ಪತ್ನಿ (ನಂತರ ಅವರು ಅಹ್ಮದಿಯಾಗಿದ್ದಾರೆ) ನನ್ನನ್ನು ನೋಡಿದಾಗಲೆಲ್ಲಾ ಪಂಜಾಬಿ ಭಾಷೆಯಲ್ಲಿ ಹೀಗೆ ಹೇಳುತ್ತಿದ್ದರು– **"ಜೇಹೂ ಜಿಯಾಕಾಂ ಓಹೋಜೀ ಕೋಕೂ"** ನನ್ನ ತಾಯಿ ಪಂಜಾಬಿನ ಹೊರಗಿನವರಾದುದರಿಂದ ಹಾಗೂ ಬಾಲ್ಯದಲ್ಲಿ ನನಗೆ ಪಂಜಾಬಿ ಹೆಚ್ಚಿಗೆ ತಿಳಿದಿರದ ಕಾರಣ ನನಗೆ ಅದರ ಅರ್ಥ ತಿಳಿಯಲಿಲ್ಲ. ನಾನು ಆ ವಾಕ್ಯದ ಅರ್ಥ ನನ್ನ ತಂದೆಯವರೊಂದಿಗೆ ಕೇಳಿದಾಗ ಅವರು ಹೇಳಿದರು– ಅದರ ಅರ್ಥ 'ಕಾಗೆಯಂತೆಯೇ ಅದರ ಮರಿ ಕಾಗೆಯೂ ಇರುತ್ತದೆ' ಎಂದು. ಕಾಗೆ ಎಂದರೆ –ನಊದು಼ಬಿಲ್ಲಾಹ್– ನಿನ್ನ ತಂದೆ, ಮತ್ತು ಕಾಗೆ ಮರಿ ನೀನಾಗಿರುವೆ ಎಂದು ಹೇಳಿದರು. ಆದರೆ ನೋಡಿರಿ, ಅನಂತರ ಎಂತಹ ಕಾಲ ಬಂತೆಂದರೆ ನಾನು ಯಾವಾಗಲಾದರೂ ನಮ್ಮ ದೊಡ್ಡಮ್ಮನ ಮನೆಗೆ ಹೋದಾಗ ಅವರು ನನ್ನನ್ನು ಬಹಳ ಗೌರವಿಸುತ್ತಿದ್ದರು. ನನಗೋಸ್ಕರ ಕಂಬಳಿ ಹಾಸುತ್ತಿದ್ದರು ಮತ್ತು ತುಂಬಾ ಆದರದಿಂದ ನನ್ನ ಮಾತುಗಳಿಗೆ ಕಿವಿಗೊಡುತ್ತಿದ್ದರು. ಅಲ್ಲಾಹನು ಲೋಕವನ್ನು ಬದಲಾಯಿಸಲು ಇಚ್ಛಿಸುವಾಗ ಹೇಗೆ ಬದಲಾಯಿಸುತ್ತಾನೆಂದು ಇದರಿಂದ ತಿಳಿದು ಬರುತ್ತಿದೆ."

ಈ ಘಟನೆಗಳು ನಮ್ಮ ವಿಶ್ವಾಸವನ್ನು ತಾಜಾಗೊಳಿಸುವವುಗಳಾಗಿವೆ ಮತ್ತು ವೃದ್ಧಿಸುವವುಗಳಾಗಿವೆ. ಇವುಗಳು ನಮ್ಮನ್ನು ಅಲ್ಲಾಹನಿಗೆ ಸಮೀಪವಾಗುವಂತೆ ಮಾಡುತ್ತವೆ. ಅಲ್ಲಾಹನ ಸಹಾಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗಿದೆ ಎಂದು ಈ ಘಟನೆಗಳು ತಿಳಿಸುತ್ತವೆ. ನಾವು ಅದರ ಪಾಲು ಪಡೆಯುವವರಾಗಬೇಕು. ಖಾದಿಯಾನಿನಲ್ಲಿ ವಾಸಿಸುವ ಅಹ್ಮದಿಯರು ಇದರ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಬೇಕಾದ ಅಗತ್ಯವಿದೆ. ಖಾದಿಯಾನ್ ಅಭಿವೃದ್ಧಿ ಹೊಂದುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿ ನಮ್ಮ ಪೈಕಿ ಅನೇಕರಿಗೆ ತಿಳಿದಿದೆ ಮತ್ತು ಅದರ ಬಗ್ಗೆ ಆಗಾಗ ಚರ್ಚಿಸುತ್ತಾರೆ. ಖಾದಿಯಾನ್ ಬಿಯಾಸ್ ನದಿ ದಡದ ತನಕ ವ್ಯಾಪಿಸುವುದು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಂದು ದಿವ್ಯದರ್ಶನವನ್ನು ಆಧಾರವಾಗಿಟ್ಟುಕೊಂಡು ಭವಿಷ್ಯ ನುಡಿದಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಖಾದಿಯಾನ್ ಬಿಯಾಸ್ ನದಿ ದಡದ ತನಕ ವ್ಯಾಪಿಸುವುದು ಎಂಬ ಭವಿಷ್ಯವಾಣಿಯನ್ನು ವಿವಿಧ ದೃಷ್ಟಿಕೋನಗಳಿಂದ ವಿವರಿಸುತ್ತಾ ಜಮಾಅತಿನ ವ್ಯಕ್ತಿಗಳು ತಮ್ಮ ಹೊಣೆಗಾರಿಕೆಗಳ ಬಗ್ಗೆ ಲಕ್ಷ್ಯ ನೀಡಬೇಕೆಂದೂ ಖಾದಿಯಾನ್‌ನಲ್ಲಿ ವಾಸಿಸುವವರು ಮಾತ್ರವಲ್ಲ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ಸಹ ಈ ವಿಷಯವನ್ನು ತನ್ನ ಮುಂದಿರಿಸಬೇಕು ಎಂದು ಹೇಳಿರುತ್ತಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇದಕ್ಕೆ ಸಂಬಂಧಿಸಿ ನಮಾಝ್‌ಗಳ ಬಗ್ಗೆ ಶ್ರದ್ಧೆ ವಹಿಸಲು ನಮ್ಮೊಂದಿಗೆ ಹೇಳಿದ್ದಾರೆ. ಊರಿನಲ್ಲಿ ಜನ ಸಂಖ್ಯೆ ವರ್ಧಿಸುವುದಕ್ಕೆ ನಮಾಝ್‌ನೊಂದಿಗೆ ಏನು ಸಂಬಂಧವಿದೆ ಎಂಬುದು ಬಹಳ ವಿಚಿತ್ರವಾಗಿ ತೋರುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಮಾತುಗಳಲ್ಲಿರುವ ಸೌಂದರ್ಯ ಇದೇ ಆಗಿದೆ. ಒಂದು ವಿಷಯವನ್ನು ಅವರು ವಿವಿಧ ದೃಷ್ಟಿಕೋನಗಳಿಂದ ವಿವರಿಸುತ್ತಾರೆ. ಆ ಮೂಲಕ ಅವರು ಆ ವಿಷಯದ ಮಹತ್ವವನ್ನು ಸ್ಪಷ್ಟಪಡಿಸುತ್ತಾರೆ. ಅದರ ಒಂದು ಸಾಧ್ಯತೆ ಈ ರೀತಿಯಿರಬಹುದು: ಖಾದಿಯಾನ್‌ನಲ್ಲಿ ಅಹ್ಮದಿಯರ ಜನಸಂಖ್ಯೆ ಎಷ್ಟು ವರ್ಧಿಸುವುದೆಂದರೆ ಖಾದಿಯಾನ್‌ನಲ್ಲಿ ಒಂದು ಬೃಹತ್ತಾದ ಮಸ್‌ಜಿದ್ ನಿರ್ಮಾಣವಾಗುವುದು. ಅದರಲ್ಲಿ ಮೂರು-ನಾಲ್ಕು ಲಕ್ಷ ಅಹ್ಮದಿಯರು ನಮಾಝ್ ಮಾಡುವರು. ನೀವು ನೋಡಿರಿ ಅಲ್ಲಾಹನು ಎಂತಹ ಅನುಗ್ರಹ ನೀಡಿರುವನು ಎಂದರೆ, ಅನ್ಯರ ಮಸ್‌ಜಿದ್‌ಗಳು ಖಾಲಿಯಾಗಿರುತ್ತವೆ. ನಾವು ನಮ್ಮ ಮಸ್‌ಜಿದ್‌ಗಳನ್ನು ಹೆಚ್ಚು ಹೆಚ್ಚಾಗಿ ವಿಶಾಲಗೊಳಿಸುತ್ತಿದ್ದೇವೆ. ನಮ್ಮ ಮಸ್‌ಜಿದ್‌ಗಳಲ್ಲಿ ಜನರಿಗೆ ನಮಾಝ್ ಮಾಡಲು ಸ್ಥಳವಕಾಶ ದೊರೆಯದಂತಾಗುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಬಗ್ಗೆ ಒಂದು ಘಟನೆಯನ್ನು ಹೀಗೆ ಬರೆದಿದ್ದಾರೆ. ''ಆಗ ನನ್ನ ಪ್ರಾಯ ಹದಿನೈದು-ಹದಿನಾರು ವರ್ಷವಾಗಿರಬಹುದು. ನಾನು ಒಂದು ಶುಕ್ರವಾರ ಮಸ್‌ಜಿದ್‌ಗೆ ಜುಮುಅ ನಮಾಝ್‌ಗೋಸ್ಕರ ಹೋಗುತ್ತಿದ್ದಾಗ ದಾರಿ ಮಧ್ಯೆ ಒಬ್ಬ ವ್ಯಕ್ತಿ ಮಸ್‌ಜಿದ್‌ನಿಂದ ಮರಳಿ ಬರುವುದನ್ನು ಕಂಡೆನು. ಆ ವ್ಯಕ್ತಿ ಹೇಳಿದರು: ಮಸ್‌ಜಿದ್ ಭರ್ತಿಯಾಗಿದೆ, ನಮಾಝ್ ಮಾಡಲು ಸ್ಥಳವಿಲ್ಲ ಎಂದು. ಈ ಮಾತು ಕೇಳಿ ನಾನು ಸಹ ಮನೆಗೆ ಮರಳಿದೆನು. ನಾನು ಮನೆಯಲ್ಲಿ ಝುಹ್‌ರ್ ನಮಾಝ್ ಅನುಷ್ಠಿಸಿದೆನು. ಆದರೆ ನಾನು ಆ ವ್ಯಕ್ತಿಯ ಮಾತಿನ ಸತ್ಯಾಂಶ ತಿಳಿಯಲು ಪ್ರಯತ್ನ ಮಾಡದುದು ನಾನು ಮಾಡಿದ ತಪ್ಪಾಗಿದೆ ಎಂದು ನನಗೆ ಅನಿಸಿತು. ಅಲ್ಲಿ ಕುಳಿತುಕೊಳ್ಳಲು ಅಥವಾ ನಿಲ್ಲಲು ಸ್ಥಳವಿದ್ದಿತೇ ಎಂದು ನಾನು ಪರಿಶೀಲಿಸಬೇಕಾಗಿತ್ತು.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ನಾನು ಚಿಕ್ಕ ವಯಸ್ಸಿನಿಂದಲೇ ನಮಾಝ್ ಮಾಡಲು ಪ್ರಾರಂಭಿಸಿದ್ದೆನು. ಇಂದಿನ ತನಕ ಒಂದು ನಮಾಝ್ ಸಹ ನಷ್ಟ ಮಾಡಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ನನ್ನೊಂದಿಗೆ ನೀನು ನಮಾಝ್ ಮಾಡಿದ್ದಿಯೋ ಇಲ್ಲವೋ ಎಂದು ಎಂದೂ ಕೇಳಿರಲಿಲ್ಲ. ನಾನು ಹನ್ನೊಂದನೆಯ ಪ್ರಾಯವನ್ನು ತಲಪಿದಾಗ ಒಮ್ಮೆ ಝುಹಾ ಅಥವಾ ಇಶ್‌ರಾಖ್ ನಮಾಝ್ ಮಾಡಲು ಶುರು ಮಾಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೋಟು ಧರಿಸಿದೆನು. ಮತ್ತು ಅಲ್ಲಾಹನ ಮುಂದೆ ಬಹಳ ಅತ್ತು ಪ್ರಾರ್ಥಿಸಿದೆನು. ನಾನು ಇನ್ನು ಮುಂದೆ ಎಂದೂ ನಮಾಝನ್ನು ಬಿಟ್ಟುಬಿಡಲಾರೆನೆಂದು ಪ್ರತಿಜ್ಞೆ ಮಾಡಿದೆನು. ಈ ಪ್ರತಿಜ್ಞೆ ಮಾಡಿದ ನಂತರ ಅಲ್ಲಾಹನ ಅನುಗ್ರಹದಿಂದ ನಾನು ಯಾವುದೇ ನಮಾಝನ್ನು ಅನುಷ್ಠಿಸದೆ ಬಿಟ್ಟಿಲ್ಲ.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ''ಸಾಮೂಹಿಕವಾಗಿ ನಮಾಝನ್ನು ಮಸ್‌ಜಿದ್‌ನಲ್ಲಿ ಅನುಷ್ಠಿಸುವ ಬಗ್ಗೆ ಇರುವ ಉದಾಸೀನತೆ ಅಲ್ಲಾಹನು ನನ್ನಿಂದ ದೂರಸರಿಸಲು ಬಯಸಿದ್ದನು. ಅಂದು ನಾನು ಜುಮುಅ ನಮಾಝ್‌ಗೆ ಹೋಗದೆ ಮರಳಿ ಬಂದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮಹ್‌ಮೂದ್ ಇಲ್ಲಿಗೆ ಬಾ. ನಾನು ಅವರ ಸಮೀಪ ಹೋದಾಗ ಹೇಳಿದರು: ನೀನು ಜುಮುಅ ನಮಾಝ್‌ಗೆ ಹೋಗಲಿಲ್ಲವೇ? ನಾನು ಹೇಳಿದೆ- ನಾನು ಹೋಗಿದ್ದೆ ಆದರೆ ನಮಾಝ್ ಮಾಡಲು ಅಲ್ಲಿ ಸ್ಥಳವಿರಲಿಲ್ಲ ಎಂದು. ನಾನು ಹೀಗೆ ಹೇಳಿದ್ದರೂ ನನಗೆ ಬಹಳ ಭಯ ಉಂಟಾಗಿತ್ತು. ನಾನು ಬೇರೆಯವರ ಮಾತನ್ನು ಏಕೆ ನಂಬಿದೆ. ಆ ವ್ಯಕ್ತಿ ಹೇಳಿದ ಮಾತು ಸತ್ಯವೋ ಸುಳ್ಳೋ ಎಂದು ನನಗೆ ಗೊತ್ತಿರಲಿಲ್ಲ. ಆ ವ್ಯಕ್ತಿ ಸತ್ಯವನ್ನೇ ಹೇಳಿದ್ದರೆ ಒಳ್ಳೆಯದಾಯಿತು. ಆದರೆ ಸುಳ್ಳು ಹೇಳಿದ್ದರೆ? ನಾನು ಆ ಮಾತನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದ ಕಾರಣ ಅವರು ನನ್ನ ಮೇಲೆ ಸಿಟ್ಟಾಗುವರು ಎಂದು ನಾನು ಬಹಳ ಭಯಭೀತನಾಗಿದ್ದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ವೃಕ್ಕದಲ್ಲಿ ನೋವಿದ್ದ ಕಾರಣ ಅವರು ಮಸ್‌ಜಿದ್‌ಗೆ ಹೋಗಿರಲಿಲ್ಲ. ಜುಮುಅ ನಮಾಝ್ ನಂತರ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಬಂದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರೊಂದಿಗೆ ಕೇಳಿದರು: ಇಂದು ಮಸ್‌ಜಿದ್‌ಗೆ ಬಹಳ ಜನರು ಆಗಮಿಸಿದ್ದರೇ? ಅಲ್ಲಿ ನಮಾಝ್ ಮಾಡಲು ಸ್ಥಳವಕಾಶ ಇರಲಿಲ್ಲವೇ? ಎಂದು ಕೇಳಿದರು. ಆಗ ನಾನು ಬಹಳ ಗಾಬರಿಗೊಂಡೆ. ನನ್ನೊಂದಿಗೆ ಹೇಳಿದ ವ್ಯಕ್ತಿ ಸತ್ಯ ಹೇಳಿದರೋ ಸುಳ್ಳು ಹೇಳಿದರೋ ಎಂದು ನಾನು ಯೋಚಿಸಿದೆ. ಆದರೆ, ಅಲ್ಲಾಹನು ನನ್ನ ಗೌರವ ಕಾಪಾಡಿದನು. ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಹೇಳಿದರು- ಹುಝೂರ್ ಅಲ್ಲಾಹನ ಅನುಗ್ರಹದಿಂದ ಮಸ್‌ಜಿದ್ ಜನರಿಂದ ತುಂಬಿತ್ತು. ಅಲ್ಲಿ ಕುಳಿತುಕೊಳ್ಳಲು ಒಂದಿಷ್ಟು ಸ್ಥಳ ಸಹ ಇರಲಿಲ್ಲ. ಆಗ ನಾನು ಮನವರಿಕೆ ಮಾಡಿಕೊಂಡೆ ಆ ಅಹ್ಮದಿ ಹೇಳಿದುದು ಸತ್ಯವೇ ಆಗಿತ್ತು ಎಂದು. ನಮ್ಮ ಅಭಿವೃದ್ಧಿಯ ಮಾರ್ಗ ಅಲ್ಲಾಹನು ತೆರೆಯುವುದು ನಮ್ಮ ಮಸ್‌ಜಿದ್‌ಗಳನ್ನು ವರ್ಧಿಸುತ್ತಾ ಹೋಗುವ ಮೂಲಕ ಮತ್ತು ಮಸ್‌ಜಿದ್‌ಗಳು ಯಾವಾಗಲೂ ಜನರಿಂದ ತುಂಬುತ್ತಾ ಇರುವಾಗ. ನೀವು ಮಸ್‌ಜಿದ್‌ಗಳನ್ನು ಜನರಿಂದ ತುಂಬಿಸುತ್ತಾ ಇರುವಾಗ ನೀವು ಸಹ ಸುಖವಾಗಿರುವಿರಿ. ನೀವು ಮಸ್‌ಜಿದ್‌ಗಳನ್ನು ಬಿಟ್ಟು ಬಿಡುವಾಗ ಅಲ್ಲಾಹನು ನಿಮ್ಮನ್ನು ಸಹ ಬಿಟ್ಟುಬಿಡುವನು.''

ಖಾದಿಯಾನಿನ ವಿಶಾಲಗೊಳ್ಳುವಿಕೆ ಮತ್ತು ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ಕೇವಲ ವಿಸ್ತೀರ್ಣ ಮತ್ತು ಜನಸಂಖ್ಯೆಯನ್ನು ಗಮನಿಸಿ ಅಲ್ಲ. ಇದರ ವಿಶಾಲತೆ ನಮ್ಮ ಮನೆಗಳ ತುಂಬುವಿಕೆಯೊಂದಿಗೆ ಅಲ್ಲಾಹನ ಭವನದ ತುಂಬುವಿಕೆಯೂ ಸೇರಬೇಕು. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಖಾದಿಯಾನಿನ ನಿವಾಸಿಯಾಗಿದ್ದು ಖಾದಿಯಾನಿನ ಅಭಿವೃದ್ಧಿಯನ್ನು ಕಾಣಬೇಕಾದರೆ, ಅಥವಾ ರಬ್ವದ ನಿವಾಸಿಯಾಗಿದ್ದು ರಬ್ವದ ಅಭಿವೃದ್ಧಿ ಕಾಣಲು ಬಯಸುವುದಾದರೆ ಅಥವಾ ಯಾವುದೇ ದೇಶದ ಅಹ್ಮದಿ ಆ ದೇಶದಲ್ಲಿ ಜಮಾಅತಿನ ಅಭಿವೃದ್ಧಿಯಲ್ಲಿ ಭಾಗವಹಿಸುವುದಾದರೆ ತನ್ನ ಮನೆಯನ್ನು ಜನರಿಂದ ತುಂಬುವುದರೊಂದಿಗೆ ಮಸ್‌ಜಿದ್‌ಗಳನ್ನು ಸಹ ಜನರಿಂದ ತುಂಬುವುದು ಅತ್ಯಂತ ಆವಶ್ಯಕವಾಗಿದೆ. ನಮಗೆ ದೊರೆತ ಅಭಿವೃದ್ಧಿಗಳು ನಮಗೆ ಅಲ್ಲಾಹನಿಂದ ದೊರೆತವುಗಳಾಗಿವೆ. ಅಲ್ಲಾಹನ ಭವನವಾದ ಮಸ್‌ಜಿದನ್ನು ಜನರಿಂದ ತುಂಬಿಸುವ ಕರ್ತವ್ಯ ಈಡೇರಿಸುವಾಗ ನಮ್ಮ ಮೇಲೆ ಅಲ್ಲಾಹನ ಅನುಗ್ರಹಗಳು ವರ್ಧಿಸುತ್ತವೆ. ನಾವು ಇಂದು ಮಸ್‌ಜಿದ್‌ಗಳ ನಿರ್ಮಾಣದ ಬಗ್ಗೆ ಮಾತನಾಡುವಾಗ ಮಸ್‌ಜಿದ್ ಜನರಿಂದ ತುಂಬಿ ಸ್ಥಳವಕಾಶವಿಲ್ಲದಾಗುವ ಬಗ್ಗೆ ಯೋಚಿಸಬೇಕು. ಅಲ್ಲಾಹನೊಂದಿಗೆ ವಿಶಿಷ್ಟ ಸಂಬಂಧ ಸ್ಥಾಪಿಸಲು ಪ್ರಯತ್ನಿಸಬೇಕು. ಆಗ ಅಲ್ಲಾಹನು ನಮ್ಮನ್ನು ಎಂದೂ ಬಿಟ್ಟುಬಿಡಲಾರನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿ ಈಡೇರುವುದನ್ನು ನಾವು ಕಾಣುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಖಾದಿಯಾನಿನ ಅಭಿವೃದ್ಧಿ ಬಗ್ಗೆ ಹೇಳಿದ ಭವಿಷ್ಯವಾಣಿಗೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: "ಖಾದಿಯಾನ್ ಎಂಬ ಗ್ರಾಮ ಅಭಿವೃದ್ಧಿ ಹೊಂದುತ್ತಾ ಬಹಳ ದೊಡ್ಡ ನಗರವಾಗುವುದು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿಸಲಾಗಿತ್ತು. ಮುಂಬಯಿ, ಕಲ್ಕತ್ತದ ಹಾಗಿರುವ ನಗರವಾಗುವುದು. ಅದರ ಜನಸಂಖ್ಯೆ ಒಂಬತ್ತು-ಹತ್ತು ಲಕ್ಷವಾಗುವುದು. ಇದು ಉತ್ತರಕ್ಕೂ ಪೂರ್ವಕ್ಕೂ ಚಾಚುತ್ತಾ ಅಭಿವೃದ್ಧಿ ಹೊಂದುವುದು.'' ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಅವರ ಕಾಲಘಟ್ಟದ ಸ್ಥಿತಿಗೆ ಅನುಸಾರವಾಗಿ ಮೇಲಿನಂತೆ ಹೇಳಿದರು. ಖಾದಿಯಾನ್‌ನಿಂದ ಅಂದಾಜು ಒಂಭತ್ತು ಮೈಲಿ ದೂರದಲ್ಲಿ ಬಿಯಾಸ್ ನದಿ ಇದೆ. ಅಲ್ಲಿಯ ತನಕ ಖಾದಿಯಾನ್ ಅಭಿವೃದ್ಧಿ ಹೊಂದುವುದೆಂದು ಭವಿಷ್ಯ ನುಡಿಯಲಾಗಿದೆ.

ಈ ಭವಿಷ್ಯವಾಣಿ ಪ್ರಕಟವಾದಾಗ ಖಾದಿಯಾನಿನ ಸ್ಥಿತಿ ಹೇಗಿತ್ತೆಂದರೆ ಅಲ್ಲಿನ ಜನಸಂಖ್ಯೆ ಎರಡು ಸಾವಿರದಷ್ಟು ಮಾತ್ರ ಇತ್ತು. ಕೆಲವೇ ಮನೆಗಳು ಉತ್ತಮ ಸ್ಥಿತಿಯಲ್ಲಿದ್ದುವು. ಉಳಿದವು ಮಣ್ಣಿನಿಂದ ನಿರ್ಮಿತವಾಗಿತ್ತು. ಮನೆಗಳ ಬಾಡಿಗೆ ಎಷ್ಟು ಕಡಿಮೆ ಆಗಿತ್ತೆಂದರೆ, ಐದಾರು ಆಣೆ (ಮೂವತ್ತು-ಮೂವತ್ತಾರು ಪೈಸೆ) ತಿಂಗಳ ಬಾಡಿಗೆಗೆ ಮನೆ ದೊರಕುತ್ತಿತ್ತು. ಹತ್ತು ಹನ್ನೆರಡು ರೂಪಾಯಿಗಳಿಗೆ ಒಂದು ಮನೆ ನಿರ್ಮಿಸಲು ಬೇಕಾದ ನಿವೇಶನ ದೊರಕುತ್ತಿತ್ತು. ಪೇಟೆಯಲ್ಲಿ ಎರಡು ಮೂರು ರೂಪಾಯಿಗೆ ಗೋಧಿ ಹಿಟ್ಟು ಒಟ್ಟಿಗೆ ದೊರಕುತ್ತಿರಲಿಲ್ಲ. ಎಲ್ಲರೂ ರೈತರಾದ ಕಾರಣ ಗೋಧಿ ಹಿಟ್ಟಿಗೆ ಬದಲಾಗಿ ಗೋಧಿ ಸಂಗ್ರಹಿಸಿಡುತ್ತಿದ್ದರು. ಬೀಸುಗಲ್ಲಿನಲ್ಲಿ ಗೋಧಿ ಅರೆದು ಹಿಟ್ಟು ಮಾಡುತ್ತಿದ್ದರು. ಅಲ್ಲಿನ ವಿದ್ಯಾಲಯವೆಂದರೆ, ಒಂದು ಸರಕಾರಿ ಪ್ರಾಥಮಿಕ ಶಾಲೆ ಮಾತ್ರವಾಗಿತ್ತು. ಅದರ ಅಧ್ಯಾಪಕ ಪೋಸ್ಟ್ ಮಾಸ್ಟರ್ ಕೆಲಸ ಸಹ ಮಾಡುತ್ತಿದ್ದರು. ಅಂಚೆ ವಾರಕೊಮ್ಮೆ ಬರುತ್ತಿತ್ತು. ಎಲ್ಲ ಮನೆಗಳು ಗ್ರಾಮದ ಸುತ್ತುಗೋಡೆಯ ಒಳಗಿತ್ತು. ಈ ಭವಿಷ್ಯವಾಣಿ ಈಡೇರುವ ಯಾವ ಬಾಹ್ಯ ಲಕ್ಷಣಗಳೂ ಇರಲಿಲ್ಲ. ಖಾದಿಯಾನ್ ರೈಲುಮಾರ್ಗದಿಂದ ಹನ್ನೊಂದು ಮೈಲು ದೂರವಿತ್ತು. ಅಲ್ಲಿಗೆ ರಸ್ತೆ ಮಣ್ಣಿನದ್ದಾಗಿತ್ತು. ರೈಲು ಮಾರ್ಗದ ಸಮೀಪದ ನಗರ ಅಭಿವೃದ್ಧಿ ಹೊಂದುತ್ತದೆ. ಅಲ್ಲಿನ ಜನಸಂಖ್ಯೆ ವರ್ಧಿಸುತ್ತದೆ. ನಗರ ಅಭಿವೃದ್ಧಿ ಹೊಂದಬೇಕಾದರೆ ರೈಲು ಸಂಪರ್ಕ ಮತ್ತು ಉತ್ತಮ ಮಾರ್ಗವಿರಬೇಕು. ಖಾದಿಯಾನಿನಲ್ಲಿ ಯಾವ ಕಾರ್ಖಾನೆ ಸಹ ಇರಲಿಲ್ಲ. ಕಾರ್ಮಿಕರು ಹೆಚ್ಚಾಗುವಾಗ ನಗರ ಅಭಿವೃದ್ಧಿ ಹೊಂದುತ್ತದೆ. ಖಾದಿಯಾನಿನಲ್ಲಿ ಯಾವುದೇ ಸರಕಾರಿ ಕಛೇರಿ ಇರಲಿಲ್ಲ. ಅದು ಜಿಲ್ಲಾ ಕೇಂದ್ರವಾಗಲಿ ತಾಲೂಕಿನ ಕೇಂದ್ರವಾಗಲಿ ಆಗಿರಲಿಲ್ಲ. ಪೋಲೀಸ್ ಸ್ಟೇಶನ್ ಸಹ ಅಲ್ಲಿರಲಿಲ್ಲ. ಅದು ಒಂದು ಸಂತೆ ಸೇರುವ ಸ್ಥಳವೂ ಆಗಿರಲಿಲ್ಲ. ಈ ಭವಿಷ್ಯವಾಣಿ ಪ್ರಕಟವಾದಾಗ ಹಝ್ರತ್

ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರ ಸಂಖ್ಯೆ ಕೆಲವು ನೂರುಗಳಿಗಿಂತ ಹೆಚ್ಚಾಗಿರಲಿಲ್ಲ.

ಈ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಇಂದಿನ ಖಾದಿಯಾನಿನ ಸ್ಥಿತಿಯನ್ನು ನೋಡುವುದಾದರೆ ಖಾದಿಯಾನ್ ಈಗ ಬಿಯಾಸ್ ನದಿ ತನಕ ಹಬ್ಬಲಿಲ್ಲವಾದರೂ ಅಲ್ಲಾಹನ ಅನುಗ್ರಹದಿಂದ ಅದು ವಿಶಾಲವಾಗುತ್ತಿದೆ. ಇಂದಿನ ಖಾದಿಯಾನಿನ ಸ್ಥಿತಿಯನ್ನು ನೋಡಿ ಬುದ್ಧಿವಂತನೂ ನ್ಯಾಯನಿಷ್ಠನೂ ಆದವನು ಇದೊಂದು ದೃಷ್ಟಾಂತ ಆಗಿದೆ ಎಂದು ಒಪ್ಪುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೋಡಿದ ದಿವ್ಯದರ್ಶನದ ಅರ್ಥ ಖಾದಿಯಾನ್ ಬಿಯಾಸ್ ನದಿಯ ಆಚೆಗೆ ಅಭಿವೃದ್ಧಿ ಹೊಂದಲಾರದು ಎಂದಲ್ಲ. ಖಾದಿಯಾನ್ ಬಹಳ ವಿಶಾಲವಾಗಿ ಅಭಿವೃದ್ಧಿಗೊಂಡು ಬಿಯಾಸ್ ನದಿ ಖಾದಿಯಾನ್ ನಗರದೊಳಗೆ ಹರಿಯುವ ಒಂದು ಕಾಲುವೆಯ ಹಾಗೆ ಆಗಲೂ ಸಾಧ್ಯವಿದೆ. ಖಾದಿಯಾನ್ ನಿವಾಸಿಗಳು ಬಿಯಾಸ್ ನದಿಯ ಆಚೆ ದಡದ ಹೋಶಿಯಾರ್‌ಪುರ್ ಜಿಲ್ಲೆಯನ್ನೂ ಸಹ ತಲಪಲು ಸಾಧ್ಯವಿದೆ. ಈಗ ಖಾದಿಯಾನಿನಲ್ಲಿ ಜಮಾಅತಿನ ಕಟ್ಟಡಗಳು ನಿರ್ಮಿಸಲ್ಪಡುತ್ತವೆ. ಉದ್ಯೋಗಿಗಳಿಗೋಸ್ಕರ ವಾಸದ ಕ್ವಾರ್ಟರ್ಸ್ ಮತ್ತು ಫ್ಲಾಟ್ ನಿರ್ಮಿತವಾಗುತ್ತಿವೆ. ಬೇರೆ ಕಟ್ಟಡಗಳೂ ನಿರ್ಮಿಸಲ್ಪಡುತ್ತವೆ. ಖಾದಿಯಾನಿನ ನಿವಾಸಿಗಳು ಸಹ ದೊಡ್ಡ ವಿಶಾಲ ಮನೆಗಳನ್ನು ನಿರ್ಮಿಸಲು ಅಲ್ಲಾಹನು ಅನುಗ್ರಹ ನೀಡುತ್ತಿದ್ದಾನೆ. ಭಾರತದ ಅನುಕೂಲಸ್ಥರಾದ ಜನರು ತಮ್ಮ ಮನೆಗಳನ್ನೂ ಕಟ್ಟಡಗಳನ್ನೂ ಖಾದಿಯಾನಿನಲ್ಲಿ ನಿರ್ಮಿಸುತ್ತಿದ್ದಾರೆ. ಲೋಕದ ವಿವಿಧ ದೇಶಗಳಲ್ಲಿ ವಾಸಿಸುವ ಅಹ್ಮದಿಯರು ಸಹ ಇದರ ಬಗ್ಗೆ ಲಕ್ಷ್ಯ ನೀಡುತ್ತಿದ್ದಾರೆ. ಆದರೆ ಮೂಲಭೂತವಾದುದೇನೆಂದರೆ ಅಹ್ಮದಿಯರು ಯಾವಾಗಲೂ ನೆನಪಿನಲ್ಲಿಡಬೇಕು, ಅಭಿವೃದ್ಧಿಯ ರಹಸ್ಯ ಅಥವಾ ಅಭಿವೃದ್ಧಿಯಲ್ಲಿ ಪಾಲುಗಾರನಾಗುವ ರಹಸ್ಯವೇನೆಂದರೆ ಅಲ್ಲಾಹನ ಭವನಗಳಾದ ಮಸ್‌ಜಿದ್‌ಗಳನ್ನು ಜನನಿಬಿಡಗೊಳಿಸಬೇಕು ಮತ್ತು ಅದರೊಂದಿಗೆ ಸಂಬಂಧ ಜೋಡಿಸಬೇಕು. ಯಾರಾದರೂ ಅಲ್ಲಾಹನನ್ನು ಬಿಟ್ಟರೆ ಅಲ್ಲಾಹನೂ ಅವನನ್ನು ಬಿಟ್ಟು ಬಿಡುತ್ತಾನೆ. ಇದು ಕೇವಲ ಖಾದಿಯಾನಿನ ಅಭಿವೃದ್ಧಿಗೆ ಸಂಬಂಧಿಸಿದ ಮಾತಲ್ಲ, ಜಮಾಅತಿನ ಒಟ್ಟು ಅಭಿವೃದ್ಧಿ ಸಹ ಇದರೊಂದಿಗೆ ಸಂಬಂಧಿಸಿದೆ. ನೀವು ನಿಮ್ಮ ಮಸ್‌ಜಿದ್‌ಗಳನ್ನು ಜನರಿಂದ ತುಂಬಿಸಿ ಅದು ನಮಾಝ್ ಮಾಡುವವರಿಗೆ ಕಿರಿದಾಗುವಂತೆ ಮಾಡಿರಿ. ಮತ್ತು ನೀವು ಅಲ್ಲಾಹನ ಸಹಾಯ ದೊರಕುವುದೆಂಬ ಪ್ರತೀಕ್ಷೆ ಹೊಂದಿರಿ.

ನಾವು ಯಾವಾಗಲೂ ನೆನಪಿಡಬೇಕಾದುದು ಏನೆಂದರೆ ಕೇವಲ ಖಾದಿಯಾನಿನ ಅಭಿವೃದ್ಧಿಯ ಬಗ್ಗೆ ಮಾತ್ರ ಅಲ್ಲಾಹನು ವಾಗ್ದಾನ ಮಾಡಿಲ್ಲ. ನಮ್ಮ ಜಮಾಅತ್ ಎಲ್ಲ ರೀತಿಗಳಲ್ಲೂ ಅಭಿವೃದ್ಧಿಗಳಿಸುವುದೆಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಒಂದು ಭವಿಷ್ಯವಾಣಿ ಈಡೇರುವುದನ್ನು ಕಾಣುವಾಗ ಇನ್ನೊಂದು ಭವಿಷ್ಯವಾಣಿ ಈಡೇರುವ ಬಗ್ಗೆ ನಮಗೆ ದೃಢ ವಿಶ್ವಾಸ ವರ್ಧಿಸುತ್ತದೆ. ನೀವು ನಿಮ್ಮ ವಿಶ್ವಾಸವನ್ನು ಬಲಪಡಿಸಿರಿ. ಅಲ್ಲಾಹನೊಂದಿಗೆ ಸಂಬಂಧ ಜೋಡಿಸಿರಿ. ನಿಮ್ಮ ವಿಶ್ವಾಸ ಬಲಿಷ್ಠವಾಗಲು ಪ್ರಾರ್ಥನೆ ಸಹ ಮಾಡಿರಿ. ಸೂರ್ಯೋದಯವಾಗುವುದು ನಿಶ್ಚಯವಾಗಿಯೂ ಸೂರ್ಯೋದಯವಾಗುವುದು – ಇನ್‌ಶಾಅಲ್ಲಾಹ್. ಅಲ್ಲಾಹನ ಸಹಾಯ ಬರುವುದು. ಖಂಡಿತವಾಗಿಯೂ ಬರುವುದು.

ಇನ್ನು ನಾನು ಬೇರೆ ಕೆಲವು ವಿಷಯಗಳನ್ನು ಪ್ರಸ್ತಾಪಿಸುವೆನು. 'ವಕ್‌ಫೇ ನೌ' ಕ್ಲಾಸಿನಲ್ಲಿ ಒಬ್ಬ ಬಾಲಿಕೆ ಪ್ರಶ್ನೆ ಕೇಳಿದಳು. ಗೋರಿಗಳ ಮೇಲೆ ಹೂ ಹಾಕುವುದು ಮತ್ತು ಚಾದರ ಹಾಸುವುದು ಅನುವದನೀಯವೋ ಅಲ್ಲವೋ ಎಂದು. ಇಂತಹ ವಿಷಯದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದ್ದರು: ಕೆಲವು ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗೋರಿಯಿಂದ ಮಣ್ಣು ತಬರ್ರುಕಾಗಿ ತೆಗೆದುಕೊಂಡು ಹೋಗುತ್ತಾರೆಂದು ನನಗೆ ತಿಳಿಯಿತು. ಕೆಲವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗೋರಿ ಮೇಲೆ ಹೂ ಹಾಕುತ್ತಾರೆ. ಇವೆಲ್ಲಾ ನಿಷ್ಪ್ರಯೋಜಕ ಕೆಲಸಗಳಾಗಿವೆ. ಇವುಗಳಿಂದ ಯಾವ ಪ್ರಯೋಜನವೂ ಇಲ್ಲ. ಅಲ್ಲದೆ ವಿಶ್ವಾಸಕ್ಕೆ ಇದು ಹಾನಿಕರವಾಗಿದೆ. ಗೋರಿ ಮೇಲೆ ಹೂ ಹಾಕಿದರೆ ದಫನ್ ಗೊಂಡವರಿಗೆ ಸಿಗುವ ಪ್ರಯೋಜನವೇನು? ಆದರೆ, ದುಆ ಮಾಡಬೇಕು. ಅದರಿಂದ ಪ್ರಯೋಜನವಾಗುತ್ತದೆ. ಜನರು ಮೃತರಾದಾಗ ದಫನುಗೊಳಿಸಲ್ಪಡುತ್ತಾರೆ. ಅವರ ದೇಹ ಮಣ್ಣಾಗುತ್ತದೆ ಎಂದು ನಾವು ಕಾಣುತ್ತೇವೆ. ಇದು ಪ್ರಕೃತಿ ನಿಯಮವಾಗಿದೆ. ಹೀಗಿರುವಾಗ ಹೂವಿನ ಸುವಾಸನೆ ಮೃತನಿಗೆ ಯಾವ ಪ್ರಯೋಜನ ನೀಡಬಲ್ಲದು? ಆತ್ಮಗಳು ಶಿಕ್ಷೆ, ರಕ್ಷೆಗೋಸ್ಕರ ಅಲ್ಲಾಹನ ಮುಂದೆ ಹಾಜರಾಗುತ್ತವೆ. ಅಲ್ಲಾಹನು ಅವರೊಂದಿಗೆ ಕಾರುಣ್ಯದಿಂದ ವರ್ತಿಸುವಂತಾಗಲು ಅವರಿಗೋಸ್ಕರ ನಾವು ಪ್ರಾರ್ಥಿಸಬೇಕು. ಗೋರಿಗಳ ಸಮೀಪಕ್ಕೆ ಹೋಗಿ ಬಹುದೇವಾರಾಧಕ ಕ್ರಿಯೆಗಳನ್ನು ಮಾಡಬಾರದು. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರು ಹಾಗೆ ಮಾಡುವುದಿಲ್ಲ. ಆದರೆ ಕೆಲವು ಸಾರಿ ಹೀಗೆ ಸಂಭವಿಸುತ್ತದೆ. ಇವೆಲ್ಲಾ ನಿರರ್ಥಕ ಕೆಲಸಗಳಾಗಿವೆ. ನಮ್ಮ ಗೋರಿಗಳಲ್ಲಿ ಹಾಗೆ ಮಾಡಬಾರದು.

ಇನ್ನೊಂದು ಘಟನೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ್ದಾರೆ. ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ **"ಇಸ್ಲಾಮೀ ಉಸೂಲ್‌ಕಿ ಫಿಲಾಸಫಿ"** ಎಂಬ ಪುಸ್ತಕ ಬರೆದು ಓದಿಸಿ ಹೇಳಿದುದಕ್ಕೆ ಸಂಬಂಧಿಸಿದೆ. ಕೆಲವು ವಕ್ರಬುದ್ಧಿಯ ಜನರ ಸ್ಥಿತಿ ಮೊದಲೇ ತಿಳಿಯುತ್ತದೆ. ಅಂತಹ ಜನರು ಮೊದಲಿನಿಂದಲೇ ವಕ್ರತೆ ಹೊಂದಿರುತ್ತಾರೆ. ಅಂತಹ ಜನರ ಅಂತಿಮ ಗತಿಯನ್ನು ಸಹ ಅಲ್ಲಾಹನು ಸರಿಯಾಗಿಡುವುದಿಲ್ಲ.

1897ರಲ್ಲಿ ಲಾಹೋರಿನಲ್ಲಿ ಸರ್ವಧರ್ಮ ಸಮ್ಮೇಳನಕ್ಕೆ ಸಿದ್ಧತೆ ಪ್ರಾರಂಭವಾದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಂದು ಪ್ರಬಂಧ ಬರೆಯಲು ಅಪೇಕ್ಷಿಸಲಾಗಿತ್ತು. ಖ್ವಾಜಾ ಕಮಾಲುದ್ದೀನ್ ಸಾಹೇಬರೇ ಈ

ಸಂದೇಶ ತಂದಿದ್ದರು. ಆ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆರೋಗ್ಯ ಸರಿಯಾಗಿರಲಿಲ್ಲವಾದರೂ ಅವರು ಪ್ರಬಂಧ ಬರೆಯಲು ಪ್ರಾರಂಭಿಸಿದರು. ಅಲ್ಲಾಹನ ಅನುಗ್ರಹದಿಂದ ಅದನ್ನು ಪೂರ್ಣಗೊಳಿಸಿದರು. ಈ ಪ್ರಬಂಧವನ್ನು ಖ್ವಾಜಾ ಸಾಹೇಬರಿಗೆ ಓದಲು ಕೊಟ್ಟರು. ಖ್ವಾಜಾ ಸಾಹೇಬರು ಆ ಲೇಖನದ ಬಗ್ಗೆ ನಿರಾಶೆ ಸೂಚಿಸಿದರು. ಅವರು ಹೇಳಿದರು: ಈ ಲೇಖನವನ್ನು ಜನರು ಆದರ ಭಾವದಿಂದ ಕಾಣಲಾರರು. ಜನರು ಅದನ್ನು ಅಪಹಾಸ್ಯ ಮಾಡುವರು ಎಂದು ಹೇಳಿದರು. ಆದರೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿಸಿದ್ದನು. **"ಮಝ್ಮೂನ್ ಬಾಲಾ ರಹಾ"** (ಈ ಲೇಖನ ಶ್ರೇಷ್ಠವೆಂದು ಪರಿಗಣಿಸಲ್ಪಡುವುದು) ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಿಷಯದ ಬಗ್ಗೆ ವಿಜ್ಞಾಪನೆಯನ್ನು ಬರೆದು ಅದನ್ನು ಮುದ್ರಿಸಿ ಲಾಹೋರಿನಲ್ಲಿ ಪ್ರಕಟಿಸಲು ಖ್ವಾಜಾ ಸಾಹೇಬರೊಂದಿಗೆ ಹೇಳಿದರು. ಖ್ವಾಜಾ ಸಾಹೇಬರಿಗೆ ಈ ವಿಷಯದ ಬಗ್ಗೆ ಬಹಳ ಸಮಜಾಯಿಷಿ ನೀಡಲಾಗಿತ್ತು. ಆದರೆ ಈ ಲೇಖನ ನಿಷ್ಪ್ರಯೋಜಕ ಎಂದು ಖ್ವಾಜಾ ಸಾಹೇಬ್ ಮೊದಲೇ ನಿರ್ಧರಿಸಿದ್ದರು. ಆದುದರಿಂದ ಅವರು ವಿಜ್ಞಾಪನೆ ಪ್ರಕಟಿಸಲಿಲ್ಲ. ಬೇರೆಯವರಿಗೂ ಪ್ರಕಟಿಸಲು ಬಿಡಲಿಲ್ಲ.

ಆ ಲೇಖನ ಓದಿ ಹೇಳುವ ದಿನ ಆಗಮಿಸಿತು. ಈ ಲೇಖನ ಓದಲು ತೊಡಗಿದ ಕೂಡಲೆ ಜನರೆಲ್ಲರೂ ಹೇಗೆ ಮಂತ್ರ ಮುಗ್ಧರಾದರೆಂದು ಚರಿತ್ರೆಯಿಂದ ತಿಳಿಯುತ್ತದೆ. ಅವರ ಮೇಲೆ ಜಾದೂ ಮಾಡಿದ ಹಾಗೆ ಅವರಾಗಿದ್ದರು. ವಿರೋಧಿಗಳೂ ಸಹಮತ ಹೊಂದಿದವರೂ ಈ ಲೇಖನ ಶ್ರೇಷ್ಠವೆಂದು ಒಮ್ಮತ ಹೊಂದಿದರು. ಅಲ್ಲಾಹನು ಹೇಳಿದ ಮಾತು ಈಡೇರಿತು. ಆದರೆ ಖ್ವಾಜಾ ಸಾಹೇಬರ ಬಲಹೀನ ವಿಶ್ವಾಸ ಈ ಮಹತ್ವಪೂರ್ಣ ಭವಿಷ್ಯವಾಣಿಯನ್ನು ಅಡಗಿಸಿಟ್ಟಿತು.

ಅಹ್ಮದಿಯರು ಎಂತಹ ಧಾರ್ಮಿಕ ಅಭಿಮಾನ ಹೊಂದಬೇಕು ಎನ್ನುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಯಾವ ಸ್ಥಳದಲ್ಲಿ ಅವಾಚ್ಯ ಶಬ್ದಗಳ ಬಳಕೆಯಾಗುತ್ತದೋ, ಅಲ್ಲಿಗೆ ಹೋಗುವ ಆವಶ್ಯಕತೆ ಏನಿದೆ? ಅಲ್ಲಿಗೆ ಹೋಗುವವರಿಗೆ ಧಾರ್ಮಿಕ ಅಭಿಮಾನವಿಲ್ಲವೆಂದು ಸ್ಪಷ್ಟವಾಗುತ್ತದೆ. ನಿಮಗೆ ನೈಜ ಧಾರ್ಮಿಕ ಅಭಿಮಾನವಿದ್ದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ನಮ್ಮ ಇಮಾಮ್ ಮತ್ತು ಇತರ ಹಿರಿಯರ ವಿರುದ್ಧ ಬೈಗಳನ್ನು ಆಲಿಸಲು ಏಕೆ ಅಂತಹ ಸ್ಥಳಕ್ಕೆ ಹೋಗಬೇಕು? ನೀವು ಅಲ್ಲಿಗೆ ಹೋಗುವುದಾದರೆ ನಿಮ್ಮಲ್ಲಿ ಧಾರ್ಮಿಕ ಅಭಿಮಾನ ಇಲ್ಲ ಅಥವಾ ಬಹಳ ಕೆಳಮಟ್ಟದ ಅಭಿಮಾನ ಇದೆ ಎಂದು ತಿಳಿಯುತ್ತದೆ. ನನಗೆ ನೆನಪಿದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಲಾಹೋರಿನಲ್ಲಿ ಆರ್ಯ ಸಮಾಜದವರು ಒಂದು ಸಭೆ ಏರ್ಪಡಿಸಿದ್ದರು. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಲೇಖನ ಓದಲಾಗಿತ್ತು. ಅದರಲ್ಲಿ ಪ್ರೀತಿ ಮತ್ತು ಸೌಹಾರ್ದದ ಬಗ್ಗೆ ಪ್ರತಿಪಾದಿಸಲಾಗಿತ್ತು. ಆದರೆ, ಅನಂತರ ಒಬ್ಬ ಆರ್ಯಸಮಾಜದವನು ಒಂದು ಲೇಖನ ಓದಿದನು. ಅದರಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತೀವ್ರವಾಗಿ ನಿಂದಿಸಲಾಗಿತ್ತು. ಕ್ರೈಸ್ತರು ಮತ್ತು ಆರ್ಯ ಸಮಾಜದವರ ಕೊಳಕು ಆಕ್ಷೇಪಗಳನ್ನು ಪುನರಾವರ್ತಿಸಲಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಈ ವಿಷಯ ತಿಳಿದಾಗ ಬಹಳ ಕೋಪಗೊಂಡರು. ಅವರು ಆ ಸಭೆಗೆ ಹೋಗಿದ್ದ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಂದಿಗೆ ಕೇಳಿದರು: "ನೀವು ಪ್ರತಿಭಟಿಸಿ ಸಭೆಯಿಂದ ಏಕೆ ಹೊರಗೆ ಬರಲಿಲ್ಲ" ಎಂದು. ನೀವು ಈ ಸಂಗತಿಯನ್ನು ಎಷ್ಟು ಮಾತ್ರಕ್ಕೂ ಸಹಿಸಬಾರದಿತ್ತು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೆ ಮತ್ತೆ ಹೇಳುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನಂತರ ಅವರನ್ನು ಕ್ಷಮಿಸಿದರು.

ಖುತ್‌ಬದ ಕೊನೆಗೆ ಹಝ್ರತ್ ಖಲೀಫತುಲ್ ಮಸೀಹ್‌ರವರು ಹಾಜಿ ಮನ್‌ಝೂರ್ ಅಹ್ಮದ್ ಸಾಹೇಬ್ ದರ್ವೇಶ್ ಖಾದಿಯಾನ್‌ರವರು ಮೃತರಾದ ಬಗ್ಗೆ ಪ್ರಸ್ತಾಪಿಸಿದರು. ಅವರು 85ನೇ ಪ್ರಾಯದಲ್ಲಿ 1–5–2015ರಂದು ಖಾದಿಯಾನಿನಲ್ಲಿ ಮೃತರಾದರು. ಇನ್ನಾಲಿಲ್ಲಾಹಿ ವ ಇನ್ನಇಲೈಹಿ ರಾಜಿಊನ್. ಅವರು ಜಮಾಅತಿಗೆ ಮಾಡಿದ ಸೇವೆಗಳನ್ನು ಪ್ರಸ್ತಾಪಿಸಿ ಅಲ್ಲಾಹನು ಅವರಿಗೆ ಉನ್ನತ ಪದವಿ ನೀಡಲಿ ಎಂದು ಪ್ರಾರ್ಥಿಸಿದರು. ಅವರ ಸಂತಾನ ಸಹ ಅವರ ಹೆಜ್ಜೆ ಗುರುತು ಅನುಸರಿಸುವಂತಾಗಲಿ ಎಂದು ಪ್ರಾರ್ಥಿಸಿದರು.

--------------*****--------------

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 08-05-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon